ಹೋಗಿದ್ದ ಲಿನ್‌ನ ಗೆಳೆಯನೂ ಸೇರಿದಂತೆ ಒಂದು ಪಡೆಯೇ ಆ ಬೆಂಕಿಯಲ್ಲಿ ಲೀನವಾಗಿ ಹೋಗಿದ್ದರು. ಲಿನ್‌ನ ಹೃದಯದ ಬಡಿತ ತೀವ್ರವಾಯಿತು. ಅವನು ಆ ದಿಕ್ಕಿಗೆ ಓಡಲು ಪ್ರಯತ್ನಿಸಿದ. 'ಯಾರೂ ಚಲಿಸಬೇಡಿ!' ಎಂದು ಕಮಾಂಡರ್ ಥಾವ್ ಕಿರುಚುತ್ತಾ ಅವನ ಕೈಯನ್ನು ಬಿಗಿಯಾಗಿ ಹಿಡಿದು ಎಳೆದು 'ಒಬ್ಬನಿಗಾಗಿ ಉಳಿದವರನ್ನು ಅಪಾಯಕ್ಕೆ ತಳ್ಳಬೇಡ' ಎನ್ನುತ್ತಾ ಅವನನ್ನು ಎಳೆದುಕೊಂಡು ದಟ್ಟ ಕಾಡಿನೊಳಗೆ ಕರೆದೊಯ್ದಿದ್ದರು. ಹಿಂದೆ ಸ್ಫೋಟದ ಶಬ್ದಗಳು ಮತ್ತೆಮತ್ತೆ ಕೇಳುತ್ತಲೇ ಇದ್ದವು. ಲಿನ್ ತಲೆ ತಿರುಗಿಸಿ ನೋಡಿದನು. ಹೊಗೆ ಏರುತ್ತಿತ್ತು. ಆ ಹೊಗೆಯೊಂದಿಗೆ ಅವನ ಬಾಲ್ಯದ ಒಂದು ತುಣುಕು, ಸ್ನೇಹದ ಒಂದು ಅಧ್ಯಾಯ, ಮೌನವಾಗಿ ಅನಂತದಲ್ಲಿ ಕರಗಿ ಹೋಗುತ್ತಿತ್ತು.

***

ಗೆಳತಿಯೊಬ್ಬಳು ಗಾಬರಿಯಿಂದ ಓಡುತ್ತಾ ಬಂದು, ಉಸಿರಾಟವೇ ಸರಿಯಾಗಿ ಆಗದ ಸ್ಥಿತಿಯಲ್ಲಿ ನಿಂತಳು. ಕಣ್ಣಿನಲ್ಲಿ ನೀರು ತುಂಬಿಕೊಂಡು 'ಬಾಂಬ್ ದಾಳಿಯಿಂದ ಒಂದು ಗೆರಿಲ್ಲಾ ಪಡೆ ಸಂಪೂರ್ಣವಾಗಿ ನಾಶವಾಯಿತಂತೆ. ನಮ್ಮವರು ಪ್ರತಿತಂತ್ರ ಸಿಗದೇ ಪರದಾಡುತ್ತಿದ್ದಾರಂತೆ. ಹೀಗೆ ಆದಲ್ಲಿ ನಮ್ಮ ದೇಶ ಬಹುಬೇಗ ಅಮೆರಿಕದ ವಶವಾಗುವುದು ನಿಶ್ಚಯ ಎನ್ನುತ್ತಿದ್ದಾರೆ ಊರ ಮುಖಂಡರು. ಎಂತಹ ಪರಿಸ್ಥಿತಿಗೂ ಸಿದ್ಧರಾಗಲೂ ಕರೆ ನೀಡುತ್ತಿದ್ದಾರಂತೆ. ಪ್ರತಿಯೊಬ್ಬರ ಮನೆಯಲ್ಲೂ ಒಬ್ಬರೋ, ಇಬ್ಬರೋ ಉಳಿದಿರುವಾಗ ಇನ್ನಾವುದಕ್ಕೆ ಸಿದ್ಧರಾಗಬೇಕು ನಾವು?' ಎಂದು ಗದ್ಗದಿತಳಾಗಿ ಪ್ರಶ್ನಿಸಿದ್ದಳು. ಎಲ್ಲರ ಮುಖದಲ್ಲೂ ನಿರಾಸೆಯ ಕಾರ್ಮೋಡ ಕವಿದಿತ್ತು. ಮಾತುಗಳೆಲ್ಲಾ ಭಸ್ಮವಾಗಿ ಮೌನ ಆವರಿಸಿ, ಬದುಕೇ ನಿಧಾನವಾಗಿ ಕುಸಿಯುತ್ತಿರುವಂತೆ ಭಾಸವಾಯಿತು.

ಆ ಒಂದು ಕ್ಷಣದ ಮೌನವನ್ನು ಮುರಿಯುವಂತೆ ಪಕ್ಕದ ಮನೆಯಿಂದ ಹೃದಯವಿದ್ರಾವಕ ಕಿರುಚಾಟ ಕೇಳಿಬಂತು. ಎಲ್ಲರೂ ಬೆಚ್ಚಿಬಿದ್ದು ಆ ಮನೆಯ ಕಡೆಗೆ ಓಡಿದರು. ಅಲ್ಲಿ ಕಿಮ್‌ನ ಇನ್ನೊಬ್ಬ ಗೆಳತಿ ನೆಲದ ಮೇಲೆ ಕುಳಿತಿದ್ದಳು. ಅವಳ ಮಡಿಲಿನಲ್ಲಿ ಸುಟ್ಟು ಕರಕಲಾದ ಕೆಲವು ಬಟ್ಟೆಗಳು, ಮಸುಕಾದ ಲೋಹದ ತುಂಡು ಮತ್ತು ರಕ್ತದ ಕಲೆ ತಗುಲಿದ ಚಿಕ್ಕ ಬಟ್ಟೆಯ ಚೂರು ಇತ್ತು. ಅವುಗಳನ್ನು ಅವಳು ಎದೆಗೆ ಬಿಗಿಯಾಗಿ ಒತ್ತಿಕೊಂಡು, ಉಸಿರೇ ನಿಲ್ಲುವಂತೆ ಅಳುತ್ತಿದ್ದಳು. 'ಇದು ನನ್ನ ಮಗನದು ಅಲ್ಲ ಎಂದು ಯಾರಾದರೂ ಹೇಳಿ' ಎನ್ನುವ ಅವಳ ಧ್ವನಿ ಒಡೆದುಹೋದ ಪಾತ್ರೆಯಂತೆ ನಡುಗುತ್ತಿತ್ತು. ಅವಳ ಕಣ್ಣುಗಳು ಕೆಂಪಾಗಿದ್ದವು, ಆ ಕಣ್ಣುಗಳಲ್ಲಿ ಕಣ್ಣೀರಿಗಿಂತ ಹೆಚ್ಚಾಗಿ ಖಾಲಿತನ ಕಂಡು ಬರುತ್ತಿತ್ತು, ಬದುಕಿನ ಆಸೆಯೇ ನಿಧಾನವಾಗಿ ಕರಗಿ ಬತ್ತಿ ಹೋಗಿದ್ದಂತಹ ಖಾಲಿತನ. ಅಲ್ಲಿ ನಿಂತಿದ್ದ ಸೈನಿಕನನ್ನು ಗಮನಿಸಿದ ಕ್ಷಣವೇ ಪರಿಸ್ಥಿತಿಯ ಗಂಭೀರತೆ ಎಲ್ಲರಿಗೂ ಸ್ಪಷ್ಟವಾಯಿತು.

ಅವನ ಕೈಯಲ್ಲೊಂದು ಮುದುಡಿದ ಕಾಗದ. ಬಾಂಬ್ ದಾಳಿಗೆ ಬಲಿಯಾದವರ ಹೆಸರುಗಳ ಪಟ್ಟಿಯಿತ್ತು. ಮಾತು ಪ್ರಾರಂಭಿಸಲು ಅವನು ಪ್ರಯತ್ನಿಸಿದರೂ, ಅವನ ಧ್ವನಿಯಲ್ಲೂ ನಡುಕ ಸ್ಪಷ್ಟವಾಗಿತ್ತು. 'ಸ್ಫೋಟ ಬಹಳ ತೀವ್ರವಾಗಿತ್ತು, ಗುರುತಿಸಲು ಕಷ್ಟವಾಯಿತು' ಎಂದು ಅವನು ನಿಧಾನವಾಗಿ ಹೇಳಿದನು. ಅವಳು ಏಕಾಏಕಿ ಎದ್ದು ನಿಂತು, ಅವನ ಕಾಲಿಗೆ ಬಿದ್ದು 'ನನ್ನ ಮಗ ಓಡಿ ಬಂದಿರಬಹುದು ಅಲ್ಲವೇ? ಗಾಯಗೊಂಡಿರಬಹುದು. ನೀವು ನೋಡಿರದೇ ಇರಬಹುದು ಅಲ್ಲವೇ?' ಎಂದು ಬೇಡಿಕೊಳ್ಳುವಂತೆ ಆತನನ್ನು ಪ್ರಶ್ನಿಸುತ್ತಿದ್ದಳು.

ಅವಳ ದೃಷ್ಟಿಯನ್ನು ಎದುರಿಸಲಾಗದೇ ಸೈನಿಕನ ಕಣ್ಣುಗಳು ಕೆಳಗೆ ನೋಡತೊಡಗಿದವು. ಆ ಮೌನವೇ ಅವಳ ಪ್ರಶ್ನೆಗೆ ಉತ್ತರವಾಗಿತ್ತು.

ಆ ಕ್ಷಣದಲ್ಲಿ ಅಲ್ಲಿ ನಿಂತಿದ್ದ ಪ್ರತಿಯೊಬ್ಬರ ಉಸಿರೂ ನಿಂತಂತಾಯಿತು. 'ಆ ಪಡೆಗಳಲ್ಲಿ ಒಂದೊಮ್ಮೆ ನಮ್ಮವರಿದ್ದರೆ!' ಎಂಬ ಆತಂಕ ಎಲ್ಲರ ಮುಖಗಳಲ್ಲಿ, ಮನದಲ್ಲಿ ಪ್ರಶ್ನೆಯಾಗಿ, ಭಯವಾಗಿ ಆವರಿಸತೊಡಗಿತು. ಸೈನಿಕನ ಕೈಯಲ್ಲಿದ್ದ ಪಟ್ಟಿಯ ಕಡೆಗೆ ಎಲ್ಲರ ದೃಷ್ಟಿಯೂ ನೆಟ್ಟಿತು. ಆ ಕಾಗದದಲ್ಲಿನ ಪ್ರತಿಯೊಂದು ಹೆಸರು ಕೇವಲ ಅಕ್ಷರವಾಗಿರಲಿಲ್ಲ. ಒಂದು ಮನೆತನದ ಉಸಿರು, ಒಂದು ತಾಯಿಯ ಹೃದಯದ ತುಂಡು, ಒಂದು ಕುಟುಂಬದ ಅಪೂರ್ಣ ಕನಸಾಗಿತ್ತು. ಎಲ್ಲರ ಹೃದಯದಲ್ಲೂ ಕಾಣದ ನೋವಿನ ಸೆಳಕೊಂದು ಸುಳಿಯಿತು.